ಕನ್ನಡಪ್ರಭ ಸಿನಿಮಾ ಪುರವಣಿ
12.3.2010
ಚಿತ್ರಪ್ರಭ

# ಇಂತಿ ನಿಮ್ಮ ಜಾಕಿ



ಪುನೀತ್‌ರಾಜ್‌ಕುಮಾರ್...ಜಾಕಿ





## ಪವರ್‌ಫುಲ್ ಸೂರಿ

**ಅಣ್ಣಾವ್ರ ಮನೆ ಒಂದು ವಿಶ್ವವಿದ್ಯಾಲಯ ಎಂದರು ಸೂರಿ. ಪುನೀತ್‌ರ ಚಿತ್ರದಿಂದ ಪುನೀತರಾಗುವ ಭಾವದಲ್ಲಿದ್ದ ಸೂರಿ ನಿರ್ದೇಶನದ 'ಜಾಕಿ' ಚಿತ್ರದ ಶೂಟಿಂಗ್ ಜೋರಾಗಿ ನಡೆಯುತ್ತಿದೆ. ನಿರ್ದೇಶಕ ಸೂರಿ 'ಪವರ್ ಸ್ಟಾರ್' ಪುನೀತ್‌ರ ಚಿತ್ರವನ್ನು ನಿರ್ದೇಶಿಸಿ ಇನ್ನಷ್ಟು ಪವರ್‌ಫುಲ್ ಆಗಲಿದ್ದಾರೆ...**

■ ಹರಿ

'ನಾನು ಡಾ.ರಾಜ್ ಅವರ ಮನೆಗೆ ಭೇಟಿ ಕೊಟ್ಟಾಗ ಅಣ್ಣಾವ್ರಿಗೆ ಹೊದಿಸಿದ ಶಾಲನ್ನು ನನಗೆ ಹೊದಿಸಿತು, ರಾಜ್ ಕುಟುಂಬ. ಇದಕ್ಕಿಂತ ಗೌರವ ಇನ್ನೇನಿದೆ' ಎಂದು ಮೂಕವಿಸ್ಮಿತರಾದರು, 'ದುನಿಯಾ' ಸೂರಿ.

ಆ ಸಂಭ್ರಮದ ಮುಂದುವರಿದ ಭಾಗ ಎನ್ನುವಂತೆ, ಈಗ ಅವರಿಗೆ ಡಾ.ರಾಜ್ ಸಂಸ್ಥೆಯ ಚಿತ್ರದ ನಿರ್ದೇಶನದ ಜವಾಬ್ದಾರಿ ಹೆಗಲೇರಿದೆ.

'ದುನಿಯಾ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಒಂದು ವಿಲಕ್ಷಣ, ವಿಕ್ಷಿಪ್ತವಾದ ದುನಿಯಾವನ್ನು ಲಕ್ಷಣವಾಗಿ ಪರಿಚಯಿಸಿದ ನಿರ್ದೇಶಕ ಸೂರಿ ಒಂದು ಕಡೆ, ತಮ್ಮ ಬಹುತೇಕ ಚಿತ್ರಗಳಲ್ಲಿ ಮೇಲ್ಮಧ್ಯಮ ವರ್ಗದ ಹುಡುಗನ ಪಾತ್ರದಲ್ಲೇ ಇಮೇಜ್ ರೂಪಿಸಿಕೊಂಡಿರುವ ಪವರ್ ಸ್ಟಾರ್ ಪುನೀತ್‌ರಾಜ್‌ಕುಮಾರ್ ಇನ್ನೊಂದು ಕಡೆ; ಇಂಥಹ ಎರಡು 'ಬಿಂದಾಸ್' ಪ್ರತಿಭೆಗಳು ಒಂದೇ ಕಡೆ ಸೇರಿದರೆ, ಇಂಥದೊಂದು 'ಮಿಲನ', ಇನ್ನೊಂದು ರೀತಿಯ 'ದುನಿಯಾ' ಒಂದನ್ನು ಅನಾವರಣಗೊಳಿಸಬಹುದಾದ ಸಾಧ್ಯತೆಗಳನ್ನು ಹುಟ್ಟುಹಾಕುತ್ತದೆ. ಅಂಥದೊಂದು ಕುತೂಹಲಕ್ಕೆ ಈಗ ವೇದಿಕೆ ನಿರ್ಮಾಣವಾಗಿದೆ.

ವಜ್ರೇಶ್ವರಿ ಕಂಬೈನ್ಸ್ ನಿರ್ಮಾಣದಲ್ಲಿ, ಸೂರಿ–ಪುನೀತ್ ಜೋಡಿಯ ಚಿತ್ರ 'ಜಾಕಿ' ಸೆಟ್ಟೇರಿದೆ. ಕಂಠೀರವ ಸ್ಟುಡಿಯೋದಲ್ಲಿ ಕಳೆದ ವಾರ ಈ ಚಿತ್ರದ ಮುಹೂರ್ತ ಸಮಾರಂಭ ನಡೆಯಿತು. ಕ್ಲಾಪ್ ಮಾಡಿದ ರವಿಚಂದ್ರನ್ ಅವರನ್ನು ಸೇರಿದಂತೆ ಶಿವಣ್ಣ, ನಿರ್ದೇಶಕ ಪ್ರಕಾಶ್, ಜಗ್ಗೇಶ್, ಗುರುಕಿರಣ್, ರಾಕ್‌ಲೈನ್ ವೆಂಕಟೇಶ್, ಜೋಗಿ ಪ್ರೇಮ್, ನಾಗಾಭರಣ, ಎಸ್. ನಾರಾಯಣ್ ಹಾಜರಿದ್ದರು. ಪಾರ್ವತಮ್ಮ ರಾಜ್‌ಕುಮಾರ್ ಜ್ಯೋತಿ ಬೆಳಗಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ರಾಘವೇಂದ್ರ ರಾಜ್‌ಕುಮಾರ್, ಸೂರಿ, ಪುನೀತ್ ಚಿತ್ರದ ವಿವರಗಳನ್ನು ಹಂಚಿಕೊಂಡರು.

ಇಂದು ರಾಜ್ ಸಂಸ್ಥೆಯ ಚಿತ್ರದ ನಿರ್ದೇಶಕನಾಗಿರುವ ಸಂತಸದ ಘಳಿಗೆಯಲ್ಲಿ ಸೂರಿ, ತಮ್ಮ ಮೊದಲ ಚಿತ್ರ 'ದುನಿಯಾ'ದ ನಿರ್ಮಾಪಕ ಸಿದ್ಧರಾಜು, ಕಲಾಮಂದಿರದ ತಮ್ಮ ಉಪನ್ಯಾಸಕರು, ಗೆಳೆಯ ಯೋಗರಾಜ್ ಭಟ್ ಮತ್ತು ತಮ್ಮ ತಾಯಿಯವರನ್ನು ಕೃತಜ್ಞತಾಪೂರ್ವಕವಾಗಿ ನೆನೆದರು. ಡಾ. ರಾಜ್ ಮನೆ ಒಂದು ವಿಶ್ವವಿದ್ಯಾಲಯ ಎನ್ನುವ ಸೂರಿಗೆ ಇಷ್ಟವಾಗುವ ಕನ್ನಡದ ಕೆಲವು ನಟರಲ್ಲಿ ಅಪ್ಪು ಕೂಡ ಒಬ್ಬರಂತೆ.



ಭಾವನಾ

'ಇಂತಿ ನಿನ್ನ ಪ್ರೀತಿಯ' ಚಿತ್ರ ನೋಡಿದ ಮೇಲೆ ಅಪ್ಪು ಕೂಡ ಸೂರಿ ಫ್ಯಾನ್ ಆಗಿಬಿಟ್ಟರಂತೆ. ಹಾಗಾಗಿ 'ಜಾಕಿ', ಒಂಥರಾ, ಫ್ಯಾನ್‌ಗಳಿಂದ, ಫ್ಯಾನ್‌ಗಳಿಗಾಗಿ ತಯಾರಾಗುತ್ತಿರುವ ಚಿತ್ರ. ಅಂದ ಹಾಗೆ, ಇವನು ರೇಡಿಯೋ ಜಾಕಿ ಅಲ್ಲ, ರೇಸ್‌ಕೋರ್ಸ್ ಜಾಕಿ ಕೂಡ ಅಲ್ಲ. ಜನರಿಗೆ ಚಿತ್ರ ಇಷ್ಟವಾದರೆ 'ಜಾಕಿ ಜನಾರ್ಧನ್' ಆಗಬಹುದು ಅಷ್ಟೇ. ಕ್ರೌರ್ಯವನ್ನು ಬರೀ ರೌಡಿಸಂನಿಂದಲೇ ಪ್ರಸ್ತುತಪಡಿಸಬೇಕಿಲ್ಲ, ಜೀವನದಲ್ಲಿ ಅಂದುಕೊಂಡಿದ್ದೆಲ್ಲಾ ಉಲ್ಟಾ ಹೊಡೆದಾಗ ಒಬ್ಬ ಮನುಷ್ಯ ಹೇಗೆ ಪ್ರತಿಕ್ರಿಯಿಸುತ್ತಾನೆ, ಹೇಗೆ ಮಾನಸಿಕ ಕ್ರೌರ್ಯದ ಪರಮಾವಧಿಯನ್ನು ತಲುಪುತ್ತಾನೆ ಎನ್ನುವುದೇ 'ಜಾಕಿ' ಕಥೆ ಎನ್ನುತ್ತಾರೆ, ಸೂರಿ.ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ರಾಘವೇಂದ್ರ ರಾಜ್‌ಕುಮಾರ್,

2 ನೇ ಪುಟಕ್ಕೆ

# ನವತಾರೆ ನಕ್ಕಾಗ

**'ಕೆತ್ತಲಾಗದು ಕಗ್ಗಲ್ಲೆಂದು ಎದೆಗುಂದಿದ್ದರೆ ಶಿಲ್ಪಿ' ಎಂಬ ಸಾಲಿನಂತೆ ತನ್ನ ಕನಸನ್ನು ಎದೆಗೆ ಅಂಟಿಸಿಕೊಂಡೇ ಮಿಂಚಿದವರು 'ಜುಗಾರಿ' ಚಿತ್ರದ ನಾಯಕ ಅವಿನಾಶ್ ದಿವಾಕರ್. ತನ್ನ ಪ್ರಥಮ ಚಿತ್ರದಲ್ಲೇ ಕನ್ನಡಕ್ಕೆ ಹೊಸತಾರೆಯ ರೂಪದಲ್ಲಿ ಝಗಮಗಿಸಿರುವ ಅವಿನಾಶ್‌ರ ಬಗ್ಗೆ ಒಳ್ಳೆಯ ಮಾತುಗಳು ಕೇಳಿಬರುತ್ತಿವೆ.**

ಹ್ಯಾರಿ



ಶಿಲ್ಪಕಲೆಯಲ್ಲಿ ತನ್ನ ಭವಿಷ್ಯ ಕೆತ್ತಿಕೊಳ್ಳುತ್ತಿದ್ದ ಚಿಗುರು ಮೀಸೆಯ ಹುಡುಗ, ತಾನು ಕೆತ್ತಿದ ಚಾರ್ಲಿಚಾಪ್ಲಿನ್ ಶಿಲ್ಪವೊಂದಕ್ಕೆ ಜರ್ಮನಿ ದೇಶದ ಪ್ರತಿಷ್ಠಿತ ಪ್ರಶಸ್ತಿ ಪಡೆದಿದ್ದ. ಲಲಿತಕಲೆಯಲ್ಲಿ ಪದವಿ ಪಡೆದು ಶಿಲ್ಪಕಲೆ, ಈವೆಂಟ್ ಮ್ಯಾನೇಜ್‌ಮೆಂಟ್ ಮಾಡಿಕೊಂಡು ಅದರಲ್ಲೇ ಕಳೆದು ಹೋಗಬಹುದಾಗಿದ್ದ ಈ ಸುಂದರಾಂಗ ಈಗ ಕನ್ನಡ ಚಿತ್ರರಂಗದ ಲೇಟೆಸ್ಟ್ ಟೇಸ್ಟ್.

ಅಣ್ಣ ಎಸ್.ಡಿ. ಅರವಿಂದ್ ನಿರ್ದೇಶನದ ಚಿತ್ರ 'ಜುಗಾರಿ'ಯ ಬೈಲಾ ಗ್ಯಾಂಬ್ಲರ್. ರಮೇಶ್ ನಿರ್ಮಾಣದ 'ಜುಗಾರಿ' ಚಿತ್ರದ ಪುಟ್ಟ ಪಾತ್ರದ ಆಡಿಷನ್‌ಗೆ ಹೋದಾಗ ಅವಿನಾಶ್ ರಿಜೆಕ್ಟ್ ಆಗಿದ್ದರು. ಆ ವೈಫಲ್ಯ ಅವರನ್ನು ಸೋಲಿಸಲಿಲ್ಲ. ಬದಲಾಗಿ ಎಲ್ಲವನ್ನೂ ಬದಿಗಿಟ್ಟು ನಟನೆಯನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡಿತು. ತಿರಸ್ಕೃತರಾದ ಮೇಲೆ ಅವಿನಾಶ್, ಅಲ್ಲಿಂದ ನೇರವಾಗಿ ಹೋಗಿದ್ದು, ತಮ್ಮ ಗುರು ಕೃಷ್ಣಮೂರ್ತಿ ಕವತಾರ್ ಅವರ ಬಳಿಗೆ. ಅಲ್ಲಿ ರೂಪುಗೊಳ್ಳತೊಡಗಿದ್ದು ಒಬ್ಬ ನಟನ ಶಿಲ್ಪ. ಮೂರು ತಿಂಗಳ ಬಳಿಕ ಅಲ್ಲಿಂದ ಹೊರಬಂದಾಗ ಅವರು ಬೇರೊಂದು ಅವಿನಾಶ್ ಆಗಿದ್ದರು. ಮುಂದಿನ ಆಡಿಷನ್‌ನಲ್ಲಿ ಅರವಿಂದ್ ತಾವು ಬಯಸಿದ ಪುಟ್ಟ ಪಾತ್ರ ದೊರೆಯಿತೆಂದೇ ಭಾವಿಸಿದ್ದರು. ಫೋಟೋಶೂಟ್‌ಗೆಂದು ಎಲ್ಲಾ ತಯಾರಿ ಮಾಡಿಕೊಂಡು ಸ್ಪಾಟ್‌ಗೆ ಹೋದಾಗ ಗೊತ್ತಾಗಿದ್ದು, ಅವರಿಗೋಸ್ಕರ ಕಾಯುತ್ತಿದ್ದುದು ಕಿಟ್ಟಿಯ ಪಾತ್ರ ಅಲ್ಲ, ನಾಯಕ ಬೈಲಾನ ಪಾತ್ರ. ಅಲ್ಲಿಂದ ಮುಂದೆ ಆಗಿದ್ದು ಈಗ ಎರಡು ವಾರಗಳ ಇತಿಹಾಸ. ವಿಶಿಷ್ಟ ಚಿತ್ರಕಥೆಯ 'ಜುಗಾರಿ'ಯ ಚಾಲೆಂಜಿಂಗ್ ಪಾತ್ರದಲ್ಲಿ ತಮ್ಮ ಗಾಂಭೀರ್ಯದಿಂದಲೇ ಎಲ್ಲರನ್ನು ಪ್ರಭಾವಿತರನ್ನಾಗಿಸಿದರು ಅವಿನಾಶ್. ಹೊಸ ನಾಯಕ ನಟನೊಬ್ಬನಿಗೆ ಇರಬಹುದಾದ, ಸ್ಟಾರ್ ಎನಿಸಿಕೊಳ್ಳಬೇಕೆನಿಸುವ ಎಲ್ಲ ಚಪಲ, ಆಮಿಷ, ಆಕರ್ಷಣೆಗಳನ್ನೂ ಮೀರಿ ಚಿತ್ರಕಥೆಯ ಚೌಕಟ್ಟಿನಲ್ಲೇ ಸಂಯಮದ ಅಭಿನಯ ನೀಡಿದ ಅವಿನಾಶ್ ಜುಗಾರಿ ಚಿತ್ರದ ಹೊರತಾಗಿಯೂ ಗುರುತಿಸಿಕೊಳ್ಳುವ ನಟ.

ಮೊದಲ ಚಿತ್ರದಲ್ಲೇ ಅವಿನಾಶ್‌ಗೆ ಹಲವಾರು ಪೋಷಕ ನಟರ ಜೊತೆ ಕೆಲಸ ಮಾಡುವ ಅನಿವಾರ್ಯ ಅವಕಾಶ. 'ಅವರನ್ನೆಲ್ಲಾ ನೋಡು ನೋಡುತ್ತಲೇ ನಾನು ಅಭಿನಯ ಕಲಿತೆ, ನನ್ನದು ಆ್ಯಕ್ಟಿಂಗ್ ಎನ್ನುವುದಕ್ಕಿಂತ ರಿಯಾಕ್ಟಿಂಗ್ ಎನ್ನಬಹುದು, ಗಿರಿಜಾ ಲೋಕೇಶ್, ಅವಿನಾಶ್, ಶರತ್ ಲೋಹಿತಾಶ್ವ ಅವರ ಬದ್ಧತೆ ಅವರ ಬಗೆಗೆ ಗೌರವ ಮೂಡಿಸುತ್ತದೆ. ಒಬ್ಬೊಬ್ಬರದು ಒಂದೊಂಥರಾ ಮ್ಯಾನರಿಸಂ. ನಾನು ನನ್ನ ನಿರ್ಮಾಪಕರ ನಡವಳಿಕೆಯನ್ನು ಗಮನಿಸಿಯೂ ಹಲವಾರು ವಿಷಯಗಳನ್ನು ಗ್ರಹಿಸಿದೆ' ಎನ್ನುವ ಅವಿನಾಶ್ 'ಜುಗಾರಿ'ಗಾಗಿ ಅಭಿನಯಿಸಿದ ಮೊದಲ ದೃಶ್ಯ ನಿರ್ಮಲ ಶೌಚಾಲಯದ ಮುಂದಿನದ್ದು.

'ಜುಗಾರಿ'ಗಾಗಿ ಅವಿನಾಶ್ ಯಾವುದೇ ದೃಶ್ಯಕ್ಕಾಗಿ ತಯಾರಿ ನಡೆಸಲಿಲ್ಲವಂತೆ, ಅವರು ತಯಾರಿ ನಡೆಸಿದ್ದು ಇಡೀ ಪಾತ್ರಕ್ಕೆ. ಚಿತ್ರದ ಇತರ ಪಾತ್ರಗಳು ಇವರನ್ನು 'ನಿನ್ನ ಹೆಸರೇನು' ಎಂದು ಕೇಳಿದಾಗ 'ನನ್ನ ಬೈಲಾ ಅಂತಾರೆ' ಎಂದು ಉತ್ತರಿಸುವುದಕ್ಕೂ 'ನನ್ನ ಹೆಸರು ಬೈಲಾ' ಎನ್ನುವುದಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸಬಲ್ಲ ಸೂಕ್ಷ್ಮ ಸಂವೇದನೆಯ ನಟ ಅವಿನಾಶ್.

2 ನೇ ಪುಟಕ್ಕೆ

ಕನಸುಗಳ ರೆಕ್ಕೆ ಕಟ್ಟಿಕೊಂಡು





